ಕಾಣಿಸ್ತು. ಕೂಡಲೇ ಹೊರಹೋಗಲು ಭಯವಾಯ್ತು. ತಕ್ಷಣ ಬೈಕ್ ಚಾಲೂ ಆದ ಶಬ್ದ ಕೇಳ್ತು. ಬಹುಶಃ ಅವ್ರು ಇಬ್ಬರಿದ್ದಿರಬೇಕು."

ಕೋಣೆ ತುಂಬಾ ಬೆನ್ನು ಬಾಗಿಸಿ, ಸೂಕ್ಷ್ಮವಾಗಿ ಪರಿಶೀಲಿಸಿದ ಕರಮಚಂದ ಕಿಟಕಿಯ ಸನಿಹದ ಕಪಾಟೊಂದರ ಅಡಿಯಿಂದ ಹೊಳೆಯುವ ವಸ್ತುವೊಂದನ್ನು ಹೊರತೆಗೆದ. ನಾನು ಕತ್ತು ಬಗ್ಗಿಸಿ, ನಿರುಕಿಸಿದೆ. ಅದೊಂದು ಕ್ರಾಸ್ ಚಿಹ್ನೆಯಂತೆ ಕಾಣುತ್ತಿತ್ತು.

"ಅದು ಶಿಲುಬೆಯೆ?"

"ಊಹುಂ. ಇದರಲ್ಲಿ ಎರಡೂ ರೇಖೆಗಳು ಸಮವಾಗಿವೆ. ಶಿಲುಬೆಯಲ್ಲಿ ಒಂದು ನೀಳವಾಗಿರುತ್ತೆ. ನೋಡಿಲ್ಲಿ, ಚಿಹ್ನೆಯನ್ನು ಸುತ್ತುವರಿದ ವೃತ್ತ. ತುಂಡಾಗಿದೆ. ಬಲವಾಗಿ ಎಳೆದಂತೆ!... ತಂಗರಾಜು, ಇದನ್ನು ಗುರುತಿಸಬಲ್ಲೆಯಾ?"

ತಂಗರಾಜು ಅದರ ಮೇಲೆ ಕಣ್ಣಾಡಿಸಿ, ಗೊತ್ತಿಲ್ಲವೆಂಬಂತೆ ತಲೆ ಅಲುಗಿಸಿದ.

"ಇದು ನಿನ್ನೆ ಇರುಳು ಇಲ್ಲಿಗೆ ಭೇಟಿ ನೀಡಿದ ಅತಿಥಿಯದ್ದು! ಹೋಗುವಾಗ ತರಾತುರಿಯಲ್ಲಿ ಇದು ಯಾವುದಕ್ಕೋ ಸಿಲುಕಿ ತುಂಡಾಗಿ ಬಿದ್ದಿರಬೇಕು."

ಅದನ್ನೇ ತದೇಕ ದಿಟ್ಟಿಯಿಂದ ನೋಡಿದ ಕರಮಚಂದನ ಮೊಗದಲ್ಲಿ ಕಿರುನಗೆ ಮೂಡಿತು. ಅದನ್ನು ಜೋಪಾನವಾಗಿ ಪೊಲೀಸರ ಕೈಗೊಪ್ಪಿಸಿದ.

ಮುಸ್ಸಂಜೆ ನಾನು ದಿನಪತ್ರಿಕೆಯಲ್ಲಿ ವಿರಾಮವಾಗಿ ಕಣ್ಣೋಡಿಸುತ್ತಿದ್ದೆ. ಕರಮಚಂದ ತನ್ನ ಕೋಣೆಯಲ್ಲಿದ್ದ. ತುಸು ಹೊತ್ತಿನಲ್ಲಿ, ಆತನ ಕೊಠಡಿಯಿಂದ ಯಾರೋ ಆಗಂತುಕ ಹೊರಬಂದಂತಾಯ್ತು. ಪತ್ರಿಕೆಯಿಂದ ಕಣ್ಣು ಸರಿಸಿ, ದಿಟ್ಟಿಸಿದೆ... ಹರಿದ ಬನಿಯನ್ ಷರಟು, ಮೊಳಕಾಲಿನವರೆಗಿನ ಪ್ಯಾಂಟು, ಪೊದೆ ಮೀಸೆ, ಅರೆನೆರೆತ ತಲೆಗೂದಲಿನ, ಮಲೆನಾಡಿನ ಕಾಫಿ ಎಸ್ಟೇಟುಗಳಲ್ಲಿ ದುಡಿಯುವ ಅಪರಿಚಿತ ಆಳು... ಕರಮಚಂದನ ಗುರುತು ನನಗೇ ಪಕ್ಕನೆ ಹತ್ತಲಿಲ್ಲ!

"ಒಂದು ಸಣ್ಣ ತನಿಖೆ ಬಾಕಿಯಿದೆ. ನಾನು ಬರುವಾಗ ತಡವಾಗಬಹುದು. ಊಟಕ್ಕೆ ನನಗೆ ಕಾಯಬೇಡ. ನನ್ನ ಹತ್ರ ಕೀ ಇದೆ. ಬಾಗಿಲು ಹಾಕಿ ಮಲಗಿಕೋ."

ಅಷ್ಟು ಹೇಳಿ, ಕರಮಚಂದ ಮೆಟ್ಟಲಿಳಿದು, ಮಾಯವಾದ. ನಾನು ಮತ್ತೆ ಪತ್ರಿಕೆಯಲ್ಲಿ ಮುಖ ಹುದುಗಿಸಿದೆ.

★★★

ಮರುದಿನ ನಾನು ಕಿಚನ್‌ನಲ್ಲಿ ಬೆಳಗ್ಗಿನ ಉಪಹಾರದ ತಯಾರಿಯಲ್ಲಿರುವಾಗಲಷ್ಟೇ ಕರಮಚಂದ ಹಾಸಿಗೆಯಿಂದೆದ್ದ. ಆತ ರಾತ್ರಿ ಎಷ್ಟು ಹೊತ್ತಿಗೆ ಬಂದಿದ್ದಾನೆಂಬುದನ್ನು ನಾನು ಗಮನಿಸಿರಲಿಲ್ಲ. ಎದ್ದವನೇ ನನ್ನನ್ನು ಉದ್ದೇಶಿಸಿ, ಕೋಣೆಯಿಂದಲೇ ಕೂಗಿ ಹೇಳಿದ,

"ಬಿದ್ದಪ್ಪ, ನಾಷ್ಟಾ ಸ್ವಲ್ಪ ಜಾಸ್ತಿ ಇರಲಿ. ಉಪಹಾರಕ್ಕೆ ಕೆಲವು ಮಂದಿ ಅತಿಥಿಗಳಿರೋ ಸಾಧ್ಯತೆಯಿದೆ."

ಅವನ ಮಾತು ಒಗಟಿನಂತಿತ್ತು. ಯಾರು ಬೆಳ್ಳಂಬೆಳಿಗ್ಗೆ ಬರುವವರು?

ನಾನು ಉಪಹಾರಕ್ಕೆ ಮೇಜು ಅಣಿಗೊಳಿಸುವಾಗ, ಕರೆಗಂಟೆ ನಾದ ಹೊಮ್ಮಿಸಿತು.

"ಇದು ನಮ್ಮ ಮೊದಲ ಅತಿಥಿ. ಬಾಗಿಲು ತೆಗೆ." ಪತ್ರಿಕೆ ಓದುತ್ತಾ ಕುರ್ಚಿಯಲ್ಲಿ ಆಸೀನನಾಗಿದ್ದ ಕರಮಚಂದ ಸೂಚಿಸಿದ.

ಬಂದವನು ನನಗೆ ತೀರಾ ಅಪರಿಚಿತ. ಸಾಧಾರಣ ಮೈಕಟ್ಟು. ತಲೆಯಲ್ಲಿ ಫ್ಲಾಟ್ ಹ್ಯಾಟು.